

ಮಾಡಿಕೊಂಡಿದೆ. ನೀವು ಕಾರ್ಯಕ್ರಮಕ್ಕೆ ತಪ್ಪದೇ ಬರಬೇಕು'' ಎಂದಾಗ ಸಂತೋಷ ತಾಳಲಾರದೆ ಜೋರಾಗಿ ಕುಣಿದು ಕುಪ್ಪಳಿಸಬೇಕೆನಿಸಿತು.

ನನ್ನ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಂಡು, ಬಂದಿರುವ ಮಹಿಳಾಮಣಿಗಳನ್ನು ಮನೆ ಒಳಗೆ ಕರೆದು ಹೊಸದಾಗಿ ಸಂಶೋಧನೆ ಮಾಡಿರುವ ಹೊಸ ರುಚಿಯನ್ನು ಅವರಿಗೂ ಕೊಟ್ಟು, ಅವರೆಲ್ಲ ರಿಂದ ಶಹಭಾಷ್ ಅನ್ನಿಸಿಕೊಂಡೆ.

ಅತಿಥಿಗಳೊಂದಿಗೆ ಉಭಯ ಕುಶಲೋಪರಿ, ವಿಚಾರ ವಿನಿಮಯ ಮುಗಿದ ಬಳಿಕ ಅವರನ್ನು ಗೇಟಿನವರೆಗೂ ಬೀಳ್ಕೊಟ್ಟು ಬಂದೆ. ಸಂತೋಷ ತಾಳಲಾರದೆ ಪತಿರಾಯರಲ್ಲಿ, 'ನೋಡ್ರಿ, ಯಾವಾಗಲೂ ನನ್ನ ಲೇಖನಗಳ ಬಗ್ಗೆ ತಿರಸ್ಕಾರದ ಮಾತುಗಳನ್ನು ಆಡುತ್ತಿದ್ದಿರಿ. ಈಗ ನೋಡಿ, ನನ್ನ ಮನೆಯನ್ನು ಹುಡುಕಿಕೊಂಡು, ಹೂಗುಚ್ಛ ಕೊಟ್ಟು, ಸನ್ಮಾನ ಮಾಡಲು ಕರೆಯೋಲೆ ಕೊಟ್ಟು ಹೋಗಿದ್ದಾರೆ! ನಾನೀಗ ಈ ಏರಿಯಾಗೇ ಪ್ರಸಿದ್ಧ ವ್ಯಕ್ತಿಯಾಗಿದ್ದೇನೆ. ಇನ್ನು ಮೇಲೆ ನೀವೆಲ್ಲರೂ ನನ್ನನ್ನು ಕೇವಲ ಎಂದು ಭಾವಿಸಬೇಡಿ. ನನಗೂ ಒಳ್ಳೆಯ ಸಮಯ ಬರುತ್ತದೆಂದು ಯಾವಾಗಲೂ ಹೇಳುತ್ತಿದ್ದೆ. ಅದು ಈಗ ಬಂದಿದೆ. ಅಲ್ಲದೆ ನನಗೆ ಇದೇ ಮೊದಲ ಬಾರಿಗೆ ಸನ್ಮಾನ ಮಾಡುತ್ತಿರುವುದರಿಂದ ಕಾರ್ಯಕ್ರಮಕ್ಕೆ ಗತ್ತಿನಿಂದ ಹೋಗಬೇಕಾಗುತ್ತದೆ. ಸಭೆಯಲ್ಲಿ ಎಲ್ಲರ ಎದುರು ಎದ್ದು ಕಾಣುವಂಥ ಸೀರೆಯೊಂದನ್ನು ತಂದು ರವಿಕೆಯನ್ನು ಶೃಂಗಾರ ಮಾಡಿ ಹೊಲಿಸಬೇಕು. ಕಾರ್ಯಕ್ರಮಕ್ಕೆ ಬೇಗನೆ ಹೋಗಿ ಮುಂದಿನ ಕುರ್ಚಿಯಲ್ಲಿ ಗತ್ತಿನಿಂದ ಕುಳಿತುಕೊಳ್ಳಬೇಕು. ಮಕ್ಕಳು ಮತ್ತು ನೀವು ನನ್ನೊಂದಿಗೆ ಬರುವುದಾದರೆ ಬನ್ನಿ. ನಾನೇನು ನಿಮ್ಮನ್ನು ಒತ್ತಾಯ ಮಾಡುವುದಿಲ್ಲ. ನೀವೆಲ್ಲರು ಬಂದರೆ ನನಗೆ ಸನ್ಮಾನ ಮಾಡುವುದನ್ನು ಕಣ್ಣಾರೆ ನೋಡಬಹುದು. ನಿಮಗೂ ನನ್ನಿಂದ ಹೆಚ್ಚಿನ ಗೌರವ ಅಲ್ಲಿ ಸಿಗುತ್ತದೆ' ಎಂದಾಗ ಗಂಡ ಮಕ್ಕಳು ಏನೂ ಮಾತನಾಡದೆ ಕುಳಿತಲ್ಲಿಂದ ಎದ್ದು ಹೊರ ನಡೆದರು.

ಭಾನುವಾರ ಯಾವಾಗ ಬರುತ್ತದೆಂದು ಕಾತುರದಿಂದ ಕಾಯತೊಡಗಿದೆ. ತುಂಬಿದ ಸಭೆಯಲ್ಲಿ ಏನು ಮಾತನಾಡಬೇಕೆಂದು ದೊಡ್ಡ ಪಟ್ಟಿ ತಯಾರಿಸಿಕೊಂಡೆ. ನಿಂತರೂ ಕೂತರೂ ಸನ್ಮಾನದ ಕನಸು. ಸನ್ಮಾನದ ಫೋಟೊಗಳು ಪತ್ರಿಕೆಗಳಲ್ಲೂ ಬಂದಂತೆ ಕನಸು ಕಾಣಲಾರಂಭಿಸಿದೆ. ಕನಸು ಕಂಡೂ ಕಂಡೂ ಭೂಮಿ ಮತ್ತು ಆಕಾಶಕ್ಕೆ ವ್ಯತ್ಯಾಸ ಏನೆಂದು ತಿಳಿಯದಷ್ಟು ಮನಸ್ಸಿನ ಹತೋಟಿ ತಪ್ಪಿಹೋಗಿತ್ತು.

ಅಂತೂ ಇಂತೂ ಭಾನುವಾರ ಬಂದೇ ಬಿಟ್ಟಿತು. ಸಂಜೆ ಕಾರ್ಯಕ್ರಮಕ್ಕೆ ಬೆಳಗ್ಗಿನಿಂದಲೇ ರೆಡಿಯಾಗಲಾರಂಭಿಸಿದೆ. ಬ್ಯೂಟಿಪಾರ್ಲರಿಗೆ ಹೋಗಿ ಮೇಕಪ್ ಮಾಡಿಸಿಕೊಂಡು ಬಂದೆ. ಮಹಿಳಾ ಸಂಘದ ಆಹ್ವಾನ ಪತ್ರಿಕೆಯನ್ನು ಕೈಯಲ್ಲಿ ಹಿಡಿದು ಕಾರ್ಯಕ್ರಮಕ್ಕೆ ಹೊರಡಲು ಸಿದ್ಧಳಾದೆ. ನನ್ನ ಯಜಮಾನರು, ಮಕ್ಕಳು ತುಟಿ ಬಿಚ್ಚದೆ ನನ್ನೊಂದಿಗೆ ಬರಲು ಸಿದ್ಧರಾದರು.

ಬರೆದಿಟ್ಟಿದ್ದ ಭಾಷಣದ ಸಾಲುಗಳನ್ನು ಕಂಠಪಾಠ ಮಾಡಿಕೊಂಡೆ. ಸಭೆಯಲ್ಲಿ ನಗುಮುಖದೊಂದಿಗೆ ಹೇಗೆ ಮಾತನಾಡಬೇಕೆಂದು ಕನ್ನಡಿಯ ಮುಂದೆ ನಿಂತು ಅಭ್ಯಾಸ ಮಾಡಿ ಕಲಿತೆ. ಎಲ್ಲವೂ ಸರಿಯಾಗಿದೆ ಎಂದು ಮನಸ್ಸಿಗೆ ಅನ್ನಿಸಿದ ಬಳಿಕ ಕಾರ್ಯಕ್ರಮಕ್ಕೆ ಹೊರಟೆವು.

ಅಂದುಕೊಂಡ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ನಡೆಯುವ ಸ್ಥಳ ತಲುಪಿದೆ. ಸಮಾರಂಭಕ್ಕೆ ಬನ್ನಿಯೆಂದು ಕರೆದುಹೋಗಿದ್ದ ಮಹಿಳಾಮಣಿಗಳಲ್ಲಿ ಒಬ್ಬರೂ ಅಲ್ಲಿರಲಿಲ್ಲ. ನನಗೆ ಹೂಗುಚ್ಛ ಕೊಟ್ಟು ಎದುರುಗೊಳ್ಳಲು ಯಾರಾದರೂ ಬರುತ್ತಾರೆಂದು ಅಂದುಕೊಂಡಿದ್ದೆ. ಆದರೆ ಯಾರೊಬ್ಬರ ಸುಳಿವೂ ಇಲ್ಲ. ಆಗಿನ್ನೂ ವೇದಿಕೆ ರೆಡಿ ಮಾಡುತ್ತಾ ಬ್ಯಾನರ್ ಕಟ್ಟುತ್ತಿದ್ದರು. ವೇದಿಕೆ ಮುಂದೆ ಕುರ್ಚಿ ಕೂಡ ಹಾಕಿರಲಿಲ್ಲ. ಸ್ವಲ್ಪ ಸಮಯ ಕಳೆದ ಬಳಿಕ ಮಹಿಳಾಮಣಿಗಳು ಬ್ಯೂಟಿ ಪಾರ್ಲರ್‌ನಿಂದ ನೇರ ವೇದಿಕೆ ಬಳಿಗೆ ಬರತೊಡಗಿದರು. ಮೈಕಿನವನು ಬರುವುದು ತಡ ಆಗಿರುವುದರಿಂದ ಅವನಿಗೆ ಅಧ್ಯಕ್ಷರು ಹೇಳಲಿ ಎಂದು, ಕಾರ್ಯದರ್ಶಿ ಹೇಳಲಿಯೆಂದು ಇಬ್ಬರ ನಡುವೆ ವಾದ ವಿವಾದ ನಡೆಯುತ್ತಿತ್ತು. ಅಂತೂ ಕೊನೆಗೆ ಕಾರ್ಯಕ್ರಮ ಎರಡು ಗಂಟೆ ಲೇಟಾಗಿ ಪ್ರಾರಂಭವಾಯಿತು. ನನ್ನ ಮೇಕಪ್ ಆಗಲೇ ಕಳೆಗುಂದಿತ್ತು. ನನ್ನ ಗತ್ತು ಈಗ ಗಂಡ ಮತ್ತು ಮಕ್ಕಳ ಎದುರು ಕಡಿಮೆಯಾಗುತ್ತಾ ಬಂದಿತ್ತು.

ಇನ್ನೇನು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ವೇದಿಕೆ ಮೇಲೆ ಕರೆಯುತ್ತಾರೆಂದು ಆಚೀಚೆ ಕತ್ತು ಹೊರಳಿಸುತ್ತಾ ಕುಳಿತಿದ್ದೆ. ಆದರೆ ಅಲ್ಲಿ ಆಗಿದ್ದೇ ಬೇರೆ. ಕಾರ್ಯಕ್ರಮಕ್ಕೆ ಅದೇ ಏರಿಯಾದ ರಾಜಕೀಯ ವ್ಯಕ್ತಿಯೊಬ್ಬರನ್ನು ಕರೆಯಲಾಗಿತ್ತು. ಅವರು ಸಭೆಯನ್ನುದ್ದೇಶಿಸಿ ಭಾಷಣ ಮಾಡಲು ಪ್ರಾರಂಭಿಸಿದರು. ಅವರ ಭಾಷಣ ಕೇಳುತ್ತಿದ್ದ ನನಗೆ ನಿದ್ದೆ ಬರುತ್ತಿದ್ದರೂ ಕಣ್ಣನ್ನು ಅಗಲ ಮಾಡಿ ಕುಳಿತೆ. ಅರ್ಧ ಗಂಟೆ ಭಾಷಣ ಮಾಡಿದ ಬಳಿಕ ಅವರು ಅಲ್ಲಿಂದ ಹೊರಟರು. ಅವರ ಹಿಂದೆಯೇ ಅಲ್ಲಿದ್ದ ಅರ್ಧ ಜನರು ಹೊರ ನಡೆದರು. ಇನ್ನಾದರೂ ನನ್ನನ್ನು ವೇದಿಕೆ ಮೇಲೆ ಕರೆಯಬಹುದೆಂದುಕೊಂಡು ಅಲ್ಲಿಯೇ ಮುದುರಿ ಕುಳಿತುಕೊಂಡೆ.

ವೇದಿಕೆಯಲ್ಲಿ ಸಾಹಿತ್ಯಕ್ಕೆ ಸಂಬಂಧವಿಲ್ಲದ ಕಾರ್ಯಕ್ರಮಗಳು ಪ್ರಾರಂಭವಾದವು. ಬಹಳಷ್ಟು ತಾಳ್ಮೆಯಿಂದ ಕಾರ್ಯಕ್ರಮವನ್ನು ನೋಡುತ್ತಾ ಕುಳಿತೆ. ನನ್ನ ಸನ್ಮಾನದ ಕಾರ್ಯಕ್ರಮ ಮುಂದೆ ಮುಂದೆ ಹೋಗುತ್ತಲೇ ಇತ್ತು. ಅಷ್ಟರಲ್ಲೇ ಸಮಾರಂಭಕ್ಕೆ ಆಹ್ವಾನ ಕೊಡಲು ನಮ್ಮ ಮನೆಗೆ ಬಂದಿದ್ದ ಮಹಿಳಾ ಮಣಿಯೊಬ್ಬರು ನನ್ನನ್ನು ಗುರುತಿಸಿ ವೇದಿಕೆ ಮೇಲೆ ಕರೆದುಕೊಂಡು ಹೋದರು. ಆಗ ನಾನು ಖುಷಿಯಿಂದ ಗಂಡ ಮಕ್ಕಳ ಕಡೆಗೆ ಒಮ್ಮೆ ನೋಡಿದೆ. ಅವರೆಲ್ಲರೂ ಸುಸ್ತಾಗಿ ಒಂದು ಮೂಲೆಯಲ್ಲಿ ಕುಳಿತಿದ್ದರು. ಏಕಾದರೂ ಕಾರ್ಯಕ್ರಮಕ್ಕೆ ಬಂದೆವು ಎನ್ನುವ ರೀತಿ ನನ್ನನ್ನು ಗುರಾಯಿಸಿ ನೋಡುತ್ತಿದ್ದರು.

ಮಹಿಳಾಮಣಿಗಳು ವೇದಿಕೆಯ ಒಂದು ಬದಿ ನನ್ನನ್ನು ಕೂರಿಸಿ ಸಣ್ಣದೊಂದು ಹೂವಿನ ಮಾಲೆಯನ್ನು ಕುತ್ತಿಗೆಗೆ ಹಾಕಿದರು. ಬಳಿಕ ಚಿಕ್ಕದಾದ ಶಾಲು ಹೊದಿಸಿದರು. ಶಾಲು ಭುಜವನ್ನೂ ಮುಟ್ಟುತ್ತಿರಲಿಲ್ಲ. ಹಣ್ಣಿನ ಬುಟ್ಟಿಯನ್ನು ಕೈಗೆ ಕೊಟ್ಟರು. ನನ್ನ ಫೋಟೊ ತೆಗೆಯುತ್ತಾರೆಂಬ ಆಸೆಯಿಂದ ಅಲ್ಲೇ ಕುಳಿತೆ. ಆದರೆ ಫೋಟೊಗ್ರಾಫರ್ ಬಿಜಿಯಿದ್ದಾರೆ ಎಂದು ತಿಳಿದು ಬೇಸರವೂ ಆಯಿತು.

ವಿಧಿಯಿಲ್ಲದೆ ವೇದಿಕೆಯಿಂದ ಕೆಳಗಿಳಿದು ಬಂದೆ. ಅಷ್ಟರಲ್ಲೇ ನನ್ನ ಬಳಿ ಮಹಿಳಾಮಣಿಯೊಬ್ಬರು ಆಗಮಿಸಿ 'ದಯವಿಟ್ಟು ತಪ್ಪು ತಿಳಿಯಬೇಡಿ, ಸಮಾರಂಭಕ್ಕೆ ತಂದಿರುವ ಶಾಲು ಕಡಿಮೆಯಾಗಿದೆ, ನಿಮಗೆ ಹೊದಿಸಿರುವ ಶಾಲನ್ನು ಕೊಟ್ಟರೆ ನಾಳೆ ನಿಮ್ಮ ಮನೆಗೆ ಬೇರೊಂದು ಶಾಲು ಕಳುಹಿಸಿಕೊಡುತ್ತೇವೆ' ಎಂದಾಗ ನನ್ನ ಬೆನ್ನ ಮೇಲಿದ್ದ ಶಾಲನ್ನು ಅವರ ಕೈಗೆ ಒಪ್ಪಿಸಿದೆ. ಅಷ್ಟರಲ್ಲೇ ಮತ್ತೊಬ್ಬ ಮಹಿಳೆ ನನ್ನ ಬಳಿಗೆ ಬಂದು ನನ್ನ ಕೈಯಲ್ಲಿದ್ದ ಹಣ್ಣಿನ ಬುಟ್ಟಿಯನ್ನು ಹೇಳದೇ ಕೇಳದೇ ಎತ್ತಿಕೊಂಡು ಹೊರಟುಬಿಟ್ಟಳು. ಕೊನೆಗೆ ಶಾಲು, ಹೂವಿನ ಹಾರ, ಹಣ್ಣಿನ ಬುಟ್ಟಿ ಎಲ್ಲವನ್ನೂ ಅವರಿಗೇ ಒಪ್ಪಿಸಿ ಮನೆಗೆ ವಾಪಸ್ಸಾದೆ.

ಮನೆಗೆ ಬಂದು ಅಂದಿನ ಕಾರ್ಯಕ್ರಮಕ್ಕೆ ನನಗಾದ ಖರ್ಚು ಲೆಕ್ಕ ಹಾಕಿದಾಗ ಐದು ಸಾವಿರ ಗಡಿ ದಾಟಿತ್ತು. ಅಲ್ಲಿ ನಡೆದ ಘಟನೆ ನೆನಪಿಸಿಕೊಂಡು ಗಂಡ, ಮಕ್ಕಳಿಗೆ ಹೇಗೆ ಮುಖ ತೋರಿಸಲಿ ಎಂಬ ಸಂಕೋಚ ಕಾಡುತ್ತಿತ್ತು. ಅವರೆಲ್ಲರೂ ನನ್ನ ಪರಿಸ್ಥಿತಿ ಕಂಡು ಎಲ್ಲಿ ಹಂಗಿಸುತ್ತಾರೋ ಎನ್ನುವ ಭಯ ಮನಸ್ಸಿನಲ್ಲಿ. ಮುಂದಿನ ದಿನಗಳಲ್ಲಿ ಇಂತಹ ಸತ್ಕಾರ, ಪ್ರಶಸ್ತಿ ಆಸೆಗೆ ಬಲಿಯಾಗಬಾರದೆಂದು ಸಮಾಧಾನ ಮಾಡಿಕೊಂಡೆ.

ಪ್ರತಿಕ್ರಿಯಿಸಿ: feedback@sudha.co.in